www.vijaykarnataka.com
ವಿಜಯ ಕರ್ನಾಟಕ VK

ಬೆಂಗಳೂರಿನಲ್ಲಿ ನೀತಿ ಸಂಹಿತೆ: ಶುದ್ಧ ಕುಡಿಯುವ ನೀರಿನ ಘಟಕ ವಶಕ್ಕೆ

ಬೆಂಗಳೂರಿನಲ್ಲಿ ಸಿಗ್ನಲ್‌ಗಳ ಬಳಿ ಕೆಲಸ ಮಾಡುವ ಸಂಚಾರ ಪೊಲೀಸರ ರಕ್ತದಲ್ಲಿ ಸೀಸ ಹೆಚ್ಚಳ: ರೋಗ ನಿರೋಧಕ ಮತ್ತು ಪ್ರತಿಬಂಧಕ ಸಂಸ್ಥೆ

ಕಬ್ಬನ್‌ಪಾರ್ಕ್‌ನಲ್ಲಿ ಗಮನ ಸೆಳೆದ ಪತ್ರ ಬರೆಯುವ ಕಾರ್ಯಕ್ರಮ

ವಿಜಯ ಕರ್ನಾಟಕ 8/02/2016

ಎರಡು ವರ್ಷದಲ್ಲಿ **15,302** ಕೋಟಿ ರೂ. ವಹಿವಾಟು | **1295** ಕ್ವಿಂಟಾಲ್ ಆಹಾರ, ಎಣ್ಣೆಕಾಳು ಮಾರಾಟ

# ಏಕೀಕೃತ ಮಾರುಕಟ್ಟೆ ಪ್ರಯೋಗ ದೇಶಕ್ಕೇ ಮಾದರಿ

**ವೈ.ಗ. ಜಗದೀಶ್** ಬೆಂಗಳೂರು

ಎಪಿಎಂಸಿಗಳಲ್ಲಿ ಬೆಲೆ, ತೂಕದಲ್ಲಿ ರೈತರಿಗೆ ಆಗುತ್ತಿದ್ದ ವಂಚನೆ ತಪ್ಪಿಸಿ ನ್ಯಾಯಯುತ ಬೆಲೆ ನೇರವಾಗಿ ಸಿಗುವಂತೆ ಮಾಡಲು ಕರ್ನಾಟಕ ಸರಕಾರ ಆರಂಭಿಸಿದ್ದ ಏಕೀಕೃತ ಮಾರುಕಟ್ಟೆ ಪ್ರಯೋಗ ಇಡೀ ದೇಶಕ್ಕೆ ಮಾದರಿಯಾಗಿದೆ.

ಇದರ ಪ್ರೇರಣೆಯಿಂದ ನ್ಯಾಷನಲ್ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಸಂಸ್ಥೆಯನ್ನು ಹುಟ್ಟುಹಾಕಿರುವ ಕೇಂದ್ರ ಸರಕಾರ ಕರ್ನಾಟಕದ ಮಾದರಿಯನ್ನು ಎಲ್ಲಾ ರಾಜ್ಯಗಳಲ್ಲೂ ಅನುಸರಿಸುವಂತೆ ಶಿಫಾರಸು ಮಾಡಿದೆ. ಈಗಾಗಲೇ ಆಂಧ್ರಪ್ರದೇಶ ಸರಕಾರ ಏಕೀಕೃತ ಮಾರುಕಟ್ಟೆ ವ್ಯವಸ್ಥೆಯನ್ನು ಜಾರಿಗೊಳಿಸಿದ್ದು, ರಾಜಸ್ಥಾನ ಪ್ರಕ್ರಿಯೆ ನಡೆಸುತ್ತಿದೆ.

ತಮಿಳುನಾಡು, ಹರ್ಯಾಣ, ಗುಜರಾತ್, ಮಹಾರಾಷ್ಟ್ರ, ಒಡಿಶಾ, ಬಿಹಾರ ರಾಜ್ಯದ ಅಧಿಕಾರಿಗಳು ಕರ್ನಾಟಕಕ್ಕೆ ಬಂದು, ಏಕೀಕೃತ ಮಾರುಕಟ್ಟೆ ವ್ಯವಸ್ಥೆಯ ಅಧ್ಯಯನ ಮಾಡಿದ್ದಾರೆ. ಅಲ್ಲದೇ, ಇಲ್ಲಿ ತಂದಿರುವ ಸುಧಾರಣೆ, ಅದಕ್ಕೆ ಬಳಸಿಕೊಂಡ ತಂತ್ರಜ್ಞಾನ, ಮಾರುಕಟ್ಟೆಯಲ್ಲಿ ಮಾಡಿರುವ ವ್ಯವಸ್ಥೆ, ಕಾಯಿದೆ ತಿದ್ದುಪಡಿ ಕುರಿತು ಸಮಗ್ರ ಮಾಹಿತಿ ಪಡೆದುಹೋಗಿದ್ದಾರೆ.

**ಏನಿದು ಏಕೀಕೃತ ಮಾರುಕಟ್ಟೆ?**

ಹಿಂದೆ ಇದ್ದ ಎಪಿಎಂಸಿ ಕಾಯಿದೆ ಅನುಸಾರ ನಿರ್ದಿಷ್ಟ ಎಪಿಎಂಸಿ ವ್ಯಾಪ್ತಿಯಲ್ಲಿ ಲೈಸೆನ್ಸ್ ಹೊಂದಿದವರು ಮಾತ್ರ, ಆಯಾ ಎಪಿಎಂಸಿಯಲ್ಲಿ ರೈತರಿಂದ ನೇರವಾಗಿ ಖರೀದಿ ಮಾಡಲು ಅವಕಾಶವಿತ್ತು. ಇದರಿಂದಾಗಿ ಬೆರಳೆಣಿಕೆಯ ಪ್ರಭಾವಿ ಲೈಸೆನ್ಸ್‌ದಾರರು, ಮಾರುಕಟ್ಟೆಗೆ ಆಹಾರ ಧಾನ್ಯ, ಬೇಳೆಕಾಳು, ಎಣ್ಣೆಕಾಳು ಆವಕದ ಪ್ರಮಾಣ ಮುನ್ನಂದಾಜಿಸಿ ತಮಗೆ ಬೇಕಾದ ಬೆಲೆಯಲ್ಲಿ ಹರಾಜು ಕೂಗುತ್ತಿದ್ದರು. ಇದನ್ನು ಸಾಮಾನ್ಯ ಭಾಷೆಯಲ್ಲಿ 'ರಿಂಗ್' ಎಂದು ಕರೆಯಲಾಗುತ್ತಿತ್ತು. ರೈತರ ಹೊಲ, ತೋಟದಿಂದ ಎಷ್ಟು ಪ್ರಮಾಣದ ಉತ್ಪನ್ನ ಎಪಿಎಂಸಿ ಕಡೆ ಹೊರಟಿದೆ ಎಂಬ ಮಾಹಿತಿ ಪಡೆದೇ ಈ ರಿಂಗ್‌ಮಾಸ್ಟರ್‌ಗಳು ಆಯಾ ದಿನದ ದರ ನಿಗದಿ ಮಾಡುತ್ತಿದ್ದರು.

ಉದಾಹರಣೆಗೆ ನೂರು ಕ್ವಿಂಟಾಲ್ ಟೊಮೆಟೊ, ಹೆಸರು ಕಾಳು, ಶೇಂಗಾ ಆವಕವಾಗುವ ಎಪಿಎಂಸಿಗೆ ಒಂದೇ ದಿನ 500 ಕ್ವಿಂಟಾಲ್ ಬರುತ್ತದೆ ಎಂಬ ಮಾಹಿತಿ ಪಡೆದ ರಿಂಗ್ ಮಾಸ್ಟರ್‌ಗಳು, ಕ್ವಿಂಟಾಲ್‌ಗೆ 1000 ರೂ. ಇದ್ದ ದರವನ್ನು ಏಕಾಏಕಿ 300-400ಕ್ಕೆ ಇಳಿಸಿ ಹರಾಜು ಕೂಗುತ್ತಿದ್ದರು. ದರ ಸಿಗದೇ ರೈತರು ಪರದಾಡಿ, ಕೋಪಗೊಂಡು ಟೊಮೆಟೊದಂತಹ ವಸ್ತುಗಳನ್ನು ರಸ್ತೆಗೆ ಚೆಲ್ಲಿ ಗಲಾಟೆ ಎಬ್ಬಿಸುತ್ತಿದ್ದುದು ಉಂಟು.

ರಿಂಗ್ ತಪ್ಪಿಸಿ, ರೈತರಿಗೆ ನ್ಯಾಯಯುತ ಬೆಲೆ ಕೊಡಿಸಲು ಮುಂದಾದ ಸರಕಾರ ಅದಕ್ಕಾಗಿ ರಾಷ್ಟ್ರೀಯ ಇ-ಮಾರ್ಕೆಟ್ ಸರ್ವೀಸ್ ಲಿಮಿಟೆಡ್ ಸಂಸ್ಥೆಯನ್ನು ಹುಟ್ಟುಹಾಕಿತು. ಇದರಿಂದಾಗಿ ನಿರ್ದಿಷ್ಟ ಎಪಿಎಂಸಿಯಲ್ಲಿ ಲೈಸೆನ್ಸ್ ಪಡೆದವರು ಮಾತ್ರವಲ್ಲದೇ ಏಕೀಕೃತ ಲೈಸೆನ್ಸ್ ಪಡೆದ ಕೇರಳ, ಗುಜರಾತ್, ಮುಂಬಯಿನಲ್ಲಿ ಕುಳಿತ ಖರೀದಿದಾರರು ಆನ್‌ಲೈನ್ ಮೂಲಕ ಟ್ರೇಡಿಂಗ್ ಮಾಡಲು ಸಾಧ್ಯವಾಯಿತು.

ಅಲ್ಲದೇ, ಎಪಿಎಂಸಿ ಅಂಗಳದಲ್ಲಿ ಎಲೆಕ್ಟ್ರಾನಿಕ್ಸ್ ತೂಕದ ಮೆಷಿನ್, ಇ-ಟೆಂಡರ್, ಇ-ಆಕ್ಷನ್, ಇ-ಪೇಮೆಂಟ್ ಎಲ್ಲವೂ ಅವತರಿಸಿದವು. ಎಪಿಎಂಸಿ ಪ್ರಾಂಗಣಕ್ಕೆ ರೈತರು ಉತ್ಪನ್ನಗಳನ್ನು ತಂದು, ಶೇಖರಿಸಿ ಇಡಲು ಉಪ ಉಗ್ರಾಣಗಳನ್ನು ವ್ಯವಸ್ಥೆ ಮಾಡಲಾಯಿತು. ಉಪ ಉಗ್ರಾಣದಲ್ಲಿ ದಾಸ್ತಾನಿರುವ ಉತ್ಪನ್ನದ ಪ್ರಮಾಣ, ಮಾದರಿ, ಗ್ರೇಡಿಂಗ್, ಗುಣಮಟ್ಟ ಎಲ್ಲವನ್ನೂ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡುವ ವ್ಯವಸ್ಥೆ ಮಾಡಲಾಯಿತು. ಪಾರದರ್ಶಕ ವ್ಯವಸ್ಥೆ ಜಾರಿಗೊಳಿಸಲು ಇ-ಆಕ್ಷನ್ ಚಟುವಟಿಕೆಯನ್ನು ರೈತರ ಎದುರೇ ನಡೆಸುವ ಪದ್ಧತಿ ರೂಢಿಗೆ ಬಂತು.



ಎಪಿಎಂಸಿಗಳಲ್ಲಿ ಸ್ಥಳೀಯ ಖರೀದಿದಾರರ ಜತೆ ಆನ್‌ಲೈನ್‌ನಲ್ಲಿ ಟ್ರೇಡಿಂಗ್ ಮಾಡುವ ಖರೀದಿದಾರರು ಪಾಲ್ಗೊಳ್ಳುವುದರಿಂದ ರೈತರಿಗೆ ಸ್ಪರ್ಧಾತ್ಮಕ ಬೆಲೆ ಸಿಕ್ಕಿದೆ. ಅನಗತ್ಯ ಕಡಿತಗಳಿಗೆ ಕಡಿವಾಣ ಬಿದ್ದು ರೈತರಿಗೆ ಲಾಭವಾಗುತ್ತಿರುವುದರಿಂದ ಎಲ್ಲಾ ಎಪಿಎಂಸಿಗಳಲ್ಲಿ ಆವಕದ ಪ್ರಮಾಣ ಗಣನೀಯವಾಗಿ ಹೆಚ್ಚಿದೆ.

-**ಆರ್. ಮನೋಜ್**, ಎಂ.ಡಿ., ರಾಷ್ಟ್ರೀಯ ಇ ಮಾರ್ಕೆಟ್ ಸರ್ವೀಸಸ್ ಲಿಮಿಟೆಡ್

## 103 ಮಾರುಕಟ್ಟೆಗಳಲ್ಲಿ ಹೊಸ ಪದ್ಧತಿ

ಕರ್ನಾಟಕದಲ್ಲಿ ಪ್ರಮುಖವಾಗಿ 157 ಎಪಿಎಂಸಿಗಳಿದ್ದು, 2014ರ ಫೆಬ್ರವರಿಯಲ್ಲಿ ರಾಜ್ಯದ ಮೂರು ಎಪಿಎಂಸಿ ಮಾರುಕಟ್ಟೆಗಳಲ್ಲಿ ಏಕೀಕೃತ ಮಾರುಕಟ್ಟೆ ಪದ್ಧತಿಯನ್ನು ಪ್ರಾಯೋಗಿಕವಾಗಿ ಅನುಷ್ಠಾನ ಮಾಡಲಾಗಿತ್ತು. ಎರಡು ವರ್ಷ ಕಳೆಯುವ ಹೊತ್ತಿಗೆ 103 ಮಾರುಕಟ್ಟೆಗಳಲ್ಲಿ ಏಕೀಕೃತ ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

"ಉಗ್ರಾಣ ಆಧರಿತ ಮಾರುಕಟ್ಟೆ, ಇ-ಆಕ್ಷನ್, ಇ-ಟ್ರೇಡಿಂಗ್, ಇ-ಪೇಮೆಂಟ್ ಜಾರಿಗೊಳಿಸಿರುವುದರಿಂದಾಗಿ ರೈತರಿಗೆ ನ್ಯಾಯಯುತ ಬೆಲೆ ಸಿಕ್ಕಿದೆ ಎಂದು ವಿವರಿಸುವ ರಾಷ್ಟ್ರೀಯ ಇ-ಮಾರ್ಕೆಟ್ ಸರ್ವೀಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಹಕಾರ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ(ಮಾರುಕಟ್ಟೆ ಸುಧಾರಣೆ) ಆರ್. ಮನೋಜ್ ಅವರು, "157 ಮಾರುಕಟ್ಟೆಗಳಲ್ಲಿ ಈ ಸುಧಾರಣೆ ಜಾರಿಗೆ ತರುವ ಎಲ್ಲಾ ಸಿದ್ಧತೆ ನಡೆದಿದೆ," ಎಂದು ವಿವರಿಸುತ್ತಾರೆ. ಐಎಫ್‌ಎಸ್ ಅಧಿಕಾರಿಯಾಗಿರುವ ಆರ್. ಮನೋಜ್ ಅವರು, ಇದರ ರೂವಾರಿಯಾಗಿದ್ದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಮುಂದೆ ಏಕೀಕೃತ ಮಾರುಕಟ್ಟೆ ಪದ್ಧತಿಯ ಕರ್ನಾಟಕದ ಮಾದರಿಯನ್ನು ವಿವರಿಸಿ ಮೆಚ್ಚುಗೆ ಪಡೆದಿದ್ದಾರೆ. "ಇದರಿಂದಾಗಿ ಕಳೆದ ವರ್ಷದಷ್ಟೇ ಈ ವರ್ಷವೂ ಆವಕದ ಪ್ರಮಾಣ ಇದ್ದರೂ ರೈತರಿಗೆ ಉತ್ತಮ ಬೆಲೆ ಸಿಕ್ಕಿದೆ. ಶೇಂಗಾ ಬೀಜದ ಉದಾಹರಣೆ ನೀಡುವುದಾದರೆ ಹುಬ್ಬಳ್ಳಿ ಎಪಿಎಂಸಿಯಲ್ಲಿ ಕಳೆದ ವರ್ಷ ಪ್ರತಿ ಕ್ವಿಂಟಾಲ್‌ಗೆ 3097 ರೂ. ಸರಾಸರಿ ದರ ಸಿಕ್ಕಿದ್ದರೆ, ಈ ವರ್ಷ 4487 ರೂ. ಸಿಕ್ಕಿದೆ. ರಾಯಚೂರಿನಲ್ಲಿ 3133 ರೂ. ಬದಲಿಗೆ 4509 ರೂ., ಯಾದಗಿರಿಯಲ್ಲಿ 3230 ರೂ. ಬದಲಿಗೆ 4540 ರೂ. ಸಿಕ್ಕಿದೆ. ಆಹಾರ ಧಾನ್ಯ, ಬೇಳೆಕಾಳು, ಎಣ್ಣೆಕಾಳು ಸೇರಿದಂತೆ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.30-40ರಷ್ಟು ಹೆಚ್ಚುವರಿ ದರ ರೈತರಿಗೆ ಸಿಕ್ಕಿದೆ. ಎಲೆಕ್ಟ್ರಾನಿಕ್ ತೂಕದ ಯಂತ್ರದಿಂದಾಗಿ ತೂಕದಲ್ಲಿ ಮೋಸ ಮಾಡುವುದು ತಪ್ಪಿದೆ," ಎಂದು ತಿಳಿಸಿದ್ದಾರೆ.

